# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 658 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13/12/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಾರ್ಮಿಕರ ಇಲಾಖೆಯಲ್ಲಿ ಕಳೆದ ಐದು ವರ್ಷದಲ್ಲಿ ನೊಂದಾಯಿಸಿಕೊಂಡ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವರ್ಷವಾರು ಮಾಹಿತಿ ನೀಡುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಂಡಳಿಗಳು ಜಾರಿಗೊಳಿಸುತ್ತಿರುವ ಕಳೆದ 5 ವರ್ಷಗಳಲ್ಲಿ ವಿವಿಧ ಸಾಮಾಜಿಕ ಭದ್ರತಾ ಹಾಗು ಕಲ್ಯಾಣ ಯೋಜನೆಗಳಡಿ ನೋಂದಾಯಿಸಲಾಗಿರುವ ಫಲಾನುಭವಿಗಳ ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ.<br><br>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:<br>ಈ ಮಂಡಳಿಯಲ್ಲಿ ಕಳೆದ ಐದು ವರ್ಷದಲ್ಲಿ ನೋಂದಾಯಿಸಿಕೊಂಡ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಖ್ಯೆ:26.42 ಲಕ್ಷ. ಜಿಲ್ಲಾವಾರು ಮತ್ತು ವರ್ಷವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:<br>ಈ ಮಂಡಳಿಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಭದ್ರತಾ ಸೌಲಭ್ಯಗಳನ್ನು ಒದಗಿಸಲು ಕೆಲವು ನಿಗದಿ ಪಡಿಸಿದ ವರ್ಗಗಳ ಕಾರ್ಮಿಕರನ್ನು ಈ ಕೆಳಗಿನ ಯೋಜನೆಗಳಡಿ ನೋಂದಾಯಿಸುತ್ತಿದ್ದು, ವಿವರ ಕೆಳಕಂಡಂತಿದೆ.<br><br>
<table>
<tr><th>ಯೋಜನೆಗಳು/ ಕಾರ್ಯಕ್ರಮ</th><th>ನೋಂದಾಯಿತ ಕಾರ್ಮಿಕರ ಸಂಖ್ಯೆ</th></tr>
<tr><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ</td><td>21,88,414</td></tr>
<tr><td>ಇ-ಶ್ರಮ್ ಕಾರ್ಯಕ್ರಮ</td><td>1,03,05,839</td></tr>
<tr><td>ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ</td><td>4,15,332</td></tr>
</table>
</td></tr>
</table>

| | | |
|---|---|---|
| | | ಯೋಜನಾವಾರು ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿಯನ್ನು **ಅನುಬಂಧ-2ರಲ್ಲಿ** ಒದಗಿಸಿದೆ.<br><br>**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**<br>ಈ ಮಂಡಳಿಯಲ್ಲಿ ಸಂಘಟಿತ ವಲಯದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರನ್ನು ನೊಂದಾಯಿಸುವ ವ್ಯವಸ್ಥೆ ಇರುವುದಿಲ್ಲ. ಆದರೆ ಮಂಡಳಿಗೆ ವಂತಿಕೆ ಪಾವತಿಸಿರುವ ಸಂಘಟಿತ ಕಾರ್ಮಿಕರ 2019-20 ರಿಂದ 2023-24 ನೇ ಸಾಲಿನ ಕಾರ್ಮಿಕರ ಜಿಲ್ಲಾವಾರು ವಿವರಗಳನ್ನು **ಅನುಬಂಧ-3**ರಲ್ಲಿ ಒದಗಿಸಿದೆ. |
| ಆ) | ಕಾರ್ಮಿಕರ ಇಲಾಖೆಯಲ್ಲಿ ಕಾರ್ಮಿಕರ ಕಾರ್ಡ್‌ಗಾಗಿ ನೊಂದಾಯಿಸಿಕೊಳ್ಳಲು ಬೇಕಾಗಿರುವ ಅಗತ್ಯ ದಾಖಲೆಗಳು ಯಾವುವು; ನೋಂದಣಿ ಸಮಯದಲ್ಲಿ ಅವುಗಳನ್ನು ಪರಿಶೀಲಿಸುವ ಅಧಿಕಾರಿಗಳು ಯಾರು ಅವರ ಜವಾಬ್ದಾರಿಗಳು ಏನು ಹಾಗೂ ಕಾರ್ಮಿಕ ಕಾರ್ಡ್‌ನಿಂದ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳೇನು? | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ಯೋಜನೆಗಳಡಿ ನೋಂದಾಯಿತರಾದ ಫಲಾನುಭಾವಿಗಳಲ್ಲಿ ಕಾರ್ಮಿಕರ ಕಾರ್ಡ್ ಪಡೆಯಲು ಬೇಕಾಗಿರುವ ಅಗತ್ಯ ದಾಖಲೆಗಳು, ಪರಿಶೀಲಿಸುವ ಅಧಿಕಾರಿಗಳು ಹಾಗೂ ಆಯಾ ಯೋಜನೆಗಳನ್ವಯ ಒದಗಿಸಲಾಗುವ ಸೌಲಭ್ಯಗಳ ವಿವರ ಕೆಳಕಂಡಂತಿದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 18-60ರ ವಯೋಮಾನದ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಮಂಡಳಿಯ ತಂತ್ರಾಂಶ https://kbocwwb.karnataka.gov.in/login ಲಾಗಿನ್‌ನಲ್ಲಿ ನಿಗಧಿಪಡಿಸಿರುವ ಅರ್ಜಿಯನ್ನು ಭರ್ತಿಮಾಡಿ ನೋಂದಣಿ ಮಾಡಬಹುದಾಗಿದೆ.<br><br>**ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:**<br>ಎ) ಉದ್ಯೋಗ ಪ್ರಮಾಣ ಪತ್ರ: ಕಟ್ಟಡದ ಮಾಲೀಕರು / ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ ಅಸೋಸಿಯೇಷನ್ ನವರು ನಮೂನೆ -V(A) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕರ ಸಂಘಗಳು ನಮೂನೆ- V(B) ರಲ್ಲಿ ನೀಡುವಂತಹ 'ಉದ್ಯೋಗದ |

| | | |
|---|---|---|
| | | ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು ನಮೂನೆ- V(C) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ- V(D) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ.<br>ಬಿ) ಅರ್ಜಿದಾರರ ಬ್ಯಾಂಕ್ ಪುಸ್ತಕದ ಮುಖಪುಟದ ನಕಲು ಪ್ರತಿ.<br>ಸಿ) ಅರ್ಜಿದಾರರು ಒಂದು ವರ್ಷದಲ್ಲಿ ಕನಿಷ್ಠ 90 ದಿನಗಳ ಕಾಲ ಕಟ್ಟಡ ಅಥವಾ ಇತರೆ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಸ್ವಯಂ ಧೃಢೀಕರಣ ಪ್ರಮಾಣ ಪತ್ರ ಮತ್ತು ಲಭ್ಯವಿದ್ದಲ್ಲಿ ವೇತನ ಚೀಟಿ ಅಥವಾ ಹಾಜರಾತಿ ವಹಿ.<br>ಫಲಾನುಭವಿಗಳಾಗಿ ನೋಂದಣಿಯಾಗಲು ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ಗಳನ್ನು ನೋಂದಣಿ ಅಧಿಕಾರಿಗಳನ್ನಾಗಿ ಸರ್ಕಾರದಿಂದ ನೇಮಿಸಲಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ನಿಗಧಿತ ದಾಖಲೆಗಳೊಂದಿಗೆ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರ ಜವಾಬ್ದಾರಿಯಾಗಿರುತ್ತದೆ.<br><br>ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಹಾಗೂ ಅವರ ಅವಲಂಬಿತರಿಗಾಗಿ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು **ಅನುಬಂಧ-04** ರಲ್ಲಿ ಒದಗಿಸಿದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br><br>**1. ಅಂಬೇಡ್ಕರ್ ಕಾರ್ಮಿಕ ಸಹಾಯ ಹ ಯೋಜನೆ:**<br><br>ಈ ಯೋಜನೆಯಡಿ 24 ಅಸಂಘಟಿತ ವರ್ಗಗಳಾದ "ಕ್ಷೌರಿಕರು, ಗೃಹ ಕಾರ್ಮಿಕರು, ಅಕ್ಕಸಾಲಿಗರು, ಹಮಾಲರು, ಕಮ್ಮಾರರು, ಚಿಂದಿ ಆಯುವವರು, ಟೈಲರ್ಸ್, ಮಂಡಕ್ಕಿ ಭಟ್ಟಿ ಕಾರ್ಮಿಕರು, ಕುಂಬಾರರು, ಅಗಸರು, ಬೀದಿಬದಿ ವ್ಯಾಪಾರಿಗಳು, ಸಿನಿ ಕಾರ್ಮಿಕರು, ಹೋಟೆಲ್ ಕಾರ್ಮಿಕರು, ಫೋಟೋಗ್ರಾಫರ್ಸ್, ನೇಕಾರರು, ಬೀಡಿ ಕಾರ್ಮಿಕರು, ಸ್ವತಂತ್ರ ಲೇಖನ ಬರಹಗಾರರು, ಕಲ್ಯಾಣಮಂಟಪ/ ಸಭಾಭವನ/ ಟೆಂಟ್/ ಪೆಂಡಾಲ್‌ಗಳ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು, ಅಸಂಘಟಿತ |

ವಿಕಲಚೇತನ ಕಾರ್ಮಿಕರು, ಅಲೆಮಾರಿ ಪಂಗಡಕ್ಕೆ ಸೇರಿದ ಅಸಂಘಟಿತ ಕಾರ್ಮಿಕರು, ಹಗ್ಗ ಸಿದ್ಧಪಡಿಸುವ (ಭೈಜಂತ್ರಿ)" ಕಾರ್ಮಿಕರು, (ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ), ದಿನಪತ್ರಿಕೆ ವಿತರಣಾ ಕಾರ್ಮಿಕರು (ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ) ಹಾಗೂ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರು (ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ) ಇವರನ್ನು ನೋಂದಾಯಿಸಿ ಗುರುತಿನಚೀಟಿ ವಿತರಿಸಲಾಗುತ್ತಿದೆ.

**ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-**
**ನೋಂದಣಿಗೆ ದಾಖಲೆಗಳು:-**

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ (ಅಪ್‌ಲೋಡ್ ಮಾಡುವುದು).
- ವಯಸ್ಸಿನ ಪ್ರಮಾಣ ಪತ್ರ (ಶಾಲಾ ದಾಖಲೆ, ಜನನ ಪ್ರಮಾಣ ಪತ್ರ, ಚಾಲನಾ ಪರವಾನಿಗೆ, ಪಾಸ್ ಪೋರ್ಟ್, ಚುನವಣಾ ಗುರುತಿನ ಚೀಟಿ, ಜನ್ಮ ದಿನಾಂಕ ದಾಖಲಿಸಿದ ಪ್ಯಾನ್ ಕಾರ್ಡ್ ಇವುಗಳಲ್ಲಿ ಯಾವುದಾದರೊಂದು ಪ್ರತಿಯನ್ನು ಅಪ್‌ಲೋಡ್ ಮಾಡುವುದು).
- ಆಧಾರ್ ಕಾರ್ಡ್ ಸಂಖ್ಯೆ
- ಪಡಿತರ ಚೀಟಿ ಸಂಖ್ಯೆ (ಪ್ರತಿಯನ್ನು ಅಪ್‌ಲೋಡ್ ಮಾಡುವುದು).

**ಸೌಲಭ್ಯಗಳು:-**

**ಅ) ಅಪಘಾತಪರಿಹಾರಸೌಲಭ್ಯ**

1. ಮರಣ ಪ್ರಕರಣ- ರೂ.1.00 ಲಕ್ಷದವರೆಗೆ ಅಪಘಾತ ಪರಿಹಾರ .
2. ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ)- ರೂ.1.00 ಲಕ್ಷದವರೆಗೆ ಪರಿಹಾರ.
3. ಆಸ್ಪತ್ರೆ ವೆಚ್ಚ ಮರುಪಾವತಿ- ರೂ.50,000/-ಗಳ ವರೆಗೆ.

**(ಆ) ಸಹಜ ಮರಣ ಪರಿಹಾರ (ಅಂತ್ಯ ಕ್ರಿಯೆ ಧನಸಹಾಯ)**

ನೋಂದಾಯಿತ ಫಲಾನುಭವಿಯು ವಯೋ ಸಹಜ/ ಖಾಯಿಲೆ/ ಅಕಾಲಿಕ ಅಥವಾ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ ಸೌಲಭ್ಯ.

| | | |
|---|---|---|
| | | **ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ ನೋಂದಣಿಗೆ ದಾಖಲೆಗಳು:-**<br>• ಆಧಾರ್ ಕಾರ್ಡ್<br>• ವೃತ್ತಿ ನಿರ್ವಹಿಸುತ್ತಿರುವ ಸಂಸ್ಥೆಗಳು ವಿತರಿಸಿದ<br>• ಗುರುತಿನ ಚೀಟಿ<br>• ವೇತನ ಚೀಟಿ<br>• ವೇತನ ಪಡೆದ ಬ್ಯಾಂಕ್ ಪಾಸ್ ಬುಕ್<br><br>**ಸೌಲಭ್ಯಗಳು:-** ಈ ಯೋಜನೆಯಡಿ ನೋಂದಾಯಿತ ಪ್ಲಾಟ್ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರಿಗೆ ಅಪಘಾತದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷಗಳ ಅಪಘಾತ ಪರಿಹಾರ ಹಾಗೂ ರೂ.2.00 ಲಕ್ಷಗಳ ವಿಮಾ ಸೇರಿ ಒಟ್ಟು ರೂ.4.00 ಲಕ್ಷಗಳ ಪರಿಹಾರ ಒದಗಿಸಲಾಗುತ್ತಿದೆ. ಅಲ್ಲದೇ, ಅಪಘಾತದ ಕಾರಣ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ ಮತ್ತು ರೂ.1.00 ಲಕ್ಷದವರೆಗೆ ಆಸ್ಪತ್ರೆ ವೆಚ್ಚ ಮರುಪಾವತಿ ಮಾಡಲಾಗುತ್ತದೆ.<br><br>**ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ**<br>**ನೋಂದಣಿಗೆ ದಾಖಲೆಗಳು:-**<br>• ಆಧಾರ್ ಕಾರ್ಡ್<br>• ಬ್ಯಾಂಕ್ ಪಾಸ್ ಪುಸ್ತಕ<br>• ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ<br><br>**ಸೌಲಭ್ಯಗಳು:-**<br>ಈ ಯೋಜನೆಯಡಿ ಇ-ಶ್ರಮ್ ಪೋರ್ಟಲ್‌ನಲ್ಲಿ News Paper Boy ಎಂಬ ವರ್ಗದಡಿ ನೋಂದಾಯಿತ ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ ಅಪಘಾದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷಗಳವರಗೆ, ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ) ಹಾಗೂ ಅಪಘಾತ/ ಮಾರಣಾಂತಿಕ ಕಾಯಿಲೆ/ ಗಂಭೀರ ಅನಾರೋಗ್ಯಕ್ಕೆ ತುತ್ತಾದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷದ ಸೌಲಭ್ಯವನ್ನು ಒದಗಿಸಲಾಗುತ್ತಿದೆ ಹಾಗೂ ಸಹಜ ಮರಣ ಪ್ರಕರಣಗಳಲ್ಲಿ ರೂ.10,000/- ಧನಸಹಾಯ ಒದಗಿಸಲಾಗುತ್ತಿದೆ.<br><br>**ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತುಕ್ಷೇಮಾಭಿವೃದ್ಧಿ ಮಂಡಳಿ :**<br>**ನೋಂದಣಿಗೆ ದಾಖಲೆಗಳು:-**<br>• ಆಧಾರ್ ಕಾರ್ಡ್<br>• ಬ್ಯಾಂಕ್ ಪಾಸ್ ಪುಸ್ತಕ<br>• ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ<br>• ಪರವಾನಿಗೆ |

- **ಸೌಲಭ್ಯಗಳು:**

**(1) ಅಪಘಾತ ಪರಿಹಾರ ಸೌಲಭ್ಯ:**

- ಅಪಘಾತದಿಂದ ಫಲಾನುಭವಿಗಳು ನಿಧನರಾದಲ್ಲಿ ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ.
- ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕೆ ಅನುಗುಣವಾಗಿ ರೂ.2 ಲಕ್ಷದ ವರೆಗೆ ಪರಿಹಾರ.
- ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ-
- ಅಪಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 50,000/- ರವರೆಗೆ; ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಹಾಗೂ
- 15 ದಿನಗಳಿಗಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 1 ಲಕ್ಷದ ವರೆಗೆ ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದರ ಮರುಪಾವತಿ.
- ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯಸಂಸ್ಕಾರ ವೆಚ್ಚ: ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಬಿತರಿಗೆ ಅಂತ್ಯ ಸಂಸ್ಕಾರದ ವೆಚ್ಚವೂ ಸೇರಿದಂತೆ ರೂ.25,000/-ಗಳ ಪರಿಹಾರ.

**(2) ಶೈಕ್ಷಣಿಕ ಧನಸಹಾಯ :**

- ನೋಂದಾಯಿತ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-12ನೇ ತರಗತಿ ಅಥವಾ ತತ್ಸಮಾನ ವಾರ್ಷಿಕ ತಲಾ ರೂ.3,000/-
- ಪದವಿ ಅಥವಾ ತತ್ಸಮಾನ - ವಾರ್ಷಿಕ ತಲಾ ರೂ.5,500/-
- ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ - ವಾರ್ಷಿಕ ತಲಾ ರೂ.8,000/-
- ಸ್ನಾತಕೋತ್ತರ ಪದವಿಗಾಗಿ - ವಾರ್ಷಿಕ ತಲಾ ರೂ.11,000/-

ಅಪಘಾತದಿಂದ ನಿಧನರಾದ / ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-

- 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ - ವಾರ್ಷಿಕ ತಲಾ ರೂ.10,000/-
- ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ - ವಾರ್ಷಿಕ ತಲಾ ರೂ.20,000/-

| | | |
|---|---|---|
| | | • ಸ್ನಾತಕೋತ್ತರ ಪದವಿಗಾಗಿ - ವಾರ್ಷಿಕ ತಲಾ ರೂ.25,000/-<br>(2) **ಹೆರಿಗೆ ಭತ್ಯೆ:**<br>ಫಲಾನುಭವಿಯ ಮೊದಲ ಎರಡು ಹೆರಿಗೆಗಳಿಗೆ ಮಾತ್ರ ಸೀಮಿತಗೊಂಡಂತೆ ತಲಾ ರೂ.10,000/-ಗಳು.<br>ಮೇಲ್ಕಂಡ ಎಲ್ಲಾ ಯೋಜನೆಗಳಡಿ ಕಾರ್ಮಿಕ ಅಧಿಕಾರಿಗಳು ಪರಿಶೀಲನಾ ಅಧಿಕಾರಿಗಳಾಗಿದ್ದು, ಪಲಾನುಭವಿಗಳು ಸಲ್ಲಿಸುವ ಅರ್ಜಿಗಳನ್ನು ನಿಗದಿಪಡಿದ ಮಾನದಂಡಗಳ ಆದಾರದ ಮೇಲೆ ಕೂಲಂಕುಷವಾಗಿ ಪರಿಶೀಲಿಸಿ ಮಂಡಳಿಗೆ ವರದಿ ಸಲ್ಲಿಸುವುದು ಇವರ ಜವಾಬ್ದಾರಿಯಾಗಿದೆ.<br>**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**<br>ಈ ಮಂಡಳಿಯಲ್ಲಿ ಸಂಘಟಿತ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ನೋಂದಾಯಿಸುವ ವ್ಯವಸ್ಥೆ ಇರುವುದಿಲ್ಲ.<br>ಸಂಘಟಿತ ಕಾರ್ಮಿಕರಿಂದ ರೂ.20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ.40/- ರಂತೆ ಹಾಗೂ ಸರ್ಕಾರದಿಂದ ಪ್ರತಿ ಕಾರ್ಮಿಕರಿಂದ ರೂ.20/- ರಂತೆ ವಂತಿಗೆಯಾಗಿ ಪಾವತಿಸಲಾಗುತ್ತಿದೆ. ಈ ವಂತಿಗೆಯ ಮೊತ್ತವನ್ನು ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ<br>4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ<br>6)ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ. |
| ಇ) | ರಾಜ್ಯದಲ್ಲಿ ಕಾರ್ಮಿಕ ಕಾರ್ಡ್ ಪಡೆದಿರುವ ಅನರ್ಹರ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಕಾರ್ಡ್ ಪತ್ತೆ ಹಚ್ಚಲಾಗಿದೆ ಮತ್ತು ಎಷ್ಟು ಕಾರ್ಡ್ ರದ್ದುಗೊಳಿಸಲಾಗಿದೆ ಹಾಗೂ ಎಲ್ಲಾ ಅನರ್ಹರು ಕಾರ್ಡ್ ರದ್ದುಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಜಾರಿಗೊಳಿಸುತ್ತಿರುವ ಯೋಜನೆಗಳಲ್ಲಿ ನೋಂದಾಯಿಸಿ ಕೊಂಡಿರುವ ಫಲಾನುಭವಿಗಳಲ್ಲಿ ಕಾರ್ಮಿಕ ಕಾರ್ಡ್ ಪಡೆದಿರುವ ಅನರ್ಹರ ಸಂಖ್ಯೆ, ರದ್ದುಪಡಿಸಿರುವ ಸಂಖ್ಯೆ ರದ್ದುಪಡಿಸಲು ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ. |

| | | |
|---|---|---|
| | | **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯ ವತಿಯಿಂದ ರಾಜ್ಯಾದಾದ್ಯಂತ 2.43 ಲಕ್ಷ ಅನರ್ಹ ನೊಂದಣಿಯನ್ನು ಪತ್ತೆ ಹಚ್ಚಿ, ಸದರಿ ಎಲ್ಲಾ ನೋಂದಣಿಯನ್ನು ರದ್ದು ಪಡಿಸಲಾಗಿರುತ್ತದೆ. ಮುಂದುವರೆದು, ಆನರ್ಹ ಕಾರ್ಮಿಕರು - ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿದ್ದಲ್ಲಿ ಸ್ವತಃ ಅವರೇ ಬಂದು ನೋಂದಣಿಯನ್ನು ರದ್ದುಪಡಿಸಿಕೊಳ್ಳುವಂತೆ ಮತ್ತು ಮುಂದಿನ ದಿನಗಳಲ್ಲಿ ನೋಂದಣಿಯಾಗದಂತೆ ದಿನ ಪತ್ರಿಕೆಗಳಲ್ಲಿ ರಾಜ್ಯದಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ.<br>ರಾಜ್ಯಾದಾದ್ಯಂತ ಅನರ್ಹ ಕಾರ್ಡ್ ಗಳ ರದ್ದತಿಗಾಗಿ 1 ತಿಂಗಳ ಅಭಿಯಾನವನ್ನು ಕೈಗೊಳ್ಳಲಾಗಿರುತ್ತದೆ. ಇದಲ್ಲದೆ, ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳು ಕೂಡ ಅನರ್ಹ ನೋಂದಣಿಗಳನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ.<br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಈ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ನಿಗದಿಪಡಿಸಿದ ವರ್ಗಗಳ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲು ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲಾಗುತ್ತಿದ್ದು ಅವರಲ್ಲಿ ಅನರ್ಹ ಕಾರ್ಮಿಕರು ಇರುವುದಿಲ್ಲ ಹಾಗೂ ಈ ಕುರಿತು ಯಾವುದೇ ದೂರು ದಾಖಲಾಗಿರುವುದಿಲ್ಲ. |
| ಈ) | ಅನರ್ಹರು ಕಾರ್ಡ್ ಪಡೆದ ಪರಿಣಾಮ ಸರ್ಕಾರಕ್ಕೆ ಉಂಟಾದ ನಷ್ಟವೆಷ್ಟು; ಸದರಿ ನಷ್ಟದ ಮೊತ್ತವನ್ನು ಅನರ್ಹರಿಂದ ವಸೂಲಿ ಮಾಡಲಾಗುವುದೇ; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಜಾರಿಗೊಳಿಸುತ್ತಿರುವ ಯೋಜನೆಗಳಲ್ಲಿ ನೋಂದಾಯಿಸಿಕೊಂಡು ಕಾರ್ಡ್ ಗಳನ್ನು ಪಡೆದ ಫಲಾನುಭವಿಗಳಲ್ಲಿ ಅನರ್ಹರು ಕಾರ್ಡ್‌ಗಳನ್ನು ಪಡೆದ ಪರಿಣಾಮ ಸರ್ಕಾರಕ್ಕೆ ಉಂಟಾದ ನಷ್ಟದ ಬಗ್ಗೆ ಸಂಬಂಧಿಸಿದ ಮಂಡಳಿಗಳು ಒದಗಿಸಿರುವ ಮಾಹಿತಿ ಕೆಳಕಂಡಂತಿದೆ.<br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ನೋಂದಾಯಿತ ಫಲಾನುಭವಿಗಳಿಗೆ ನೀಡುವ ಸೌಲಭ್ಯಗಳು ಘಟಾನ್ನಾಧರಿತವಾಗಿರುತ್ತದೆ. ವೈದ್ಯಕೀಯ ಚಿಕಿತ್ಸೆ, ಮದುವೆ, ಹೆರಿಗೆ, ಆಕಸ್ಮಿಕ ಮರಣ ಮಂತಾದ ಘಟನೆಗಳಿಗೆ ಧನ ಸಹಾಯವನ್ನು ನೀಡಲಾಗುತ್ತಿದೆ. ಕಾರ್ಮಿಕರು ಸಲ್ಲಿಸುವ ದಾಖಲೆಗಳ ಆಧಾರದ ಮೇಲೆ |

| | | |
|---|---|---|
| | | ಅರ್ಜಿ ವಿಲೇವಾರಿ ಮಾಡಲಾಗುತ್ತಿದೆ. ಆದುದರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊತ್ತವನ್ನು ಅಂದಾಜಿಸಲು ಸಾಧ್ಯವಾಗಿರುವುದಿಲ್ಲ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಈ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ಸೌಲಭ್ಯಗಳನ್ನು ವಿತರಿಸುವ ಸಮಯದಲ್ಲಿ ಯೋಜನಾವಾರು ನಿಗದಿಪಡಿಸಿದ ದಾಖಲೆಗಳನ್ನು ಪಡೆಯಲಾಗುತ್ತಿದೆ ಹಾಗೂ ಅವುಗಳನ್ನು ಸಂಬಂಧಪಟ್ಟ ಕ್ಷೇತ್ರ ವ್ಯಾಪ್ತಿಯ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿ ವರದಿಯನ್ನು ಪಡೆಯಲಾಗುತ್ತಿದೆ. ಸದರಿ ಅಧಿಕಾರಿಯ ಶಿಫಾರಸ್ಸಿನ ಆದಾರದ ಮೇಲೆ ಸೌಲಭ್ಯವನ್ನು ಮಂಜೂರು ಮಾಡಲಾಗುತ್ತದೆ ಅಥವಾ ನಿರಾಕರಿಸಲಾಗುತ್ತದೆ.<br><br>ಈವರೆಗೂ ಈ ಮಂಡಳಿಯ ಯೋಜನೆಗಳಡಿ ಕಾರ್ಡ್ ಪಡೆದ ಅನರ್ಹರು ಸೌಲಭ್ಯ ಪಡೆದ ಯಾವುದೇ ದೂರುಗಳು ಬಂದಿರುವುದಿಲ್ಲ. |
| ಉ) | ಅನರ್ಹರಿಗೆ ಕಾರ್ಡ್ ವಿತರಿಸಿದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; ಅರ್ಹರಿಗೆ ಮಾತ್ರವೆ ಕಾರ್ಡ್ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಜಾರಿಗೊಳಿಸುತ್ತಿರುವ ಯೋಜನೆಗಳಲ್ಲಿ ನೋಂದಾಯಿಸಿ ಕೊಂಡು ಕಾರ್ಡ್‌ಗಳನ್ನು ಪಡೆದ ಫಲಾನುಭವಿಗಳಲ್ಲಿ ಅನರ್ಹರು ಕಾರ್ಡ್‌ಗಳನ್ನು ರದ್ದುಪಡಿಸುವ ಅಭಿಯಾನ ಹಮ್ಮಿಕೊಂಡಿದ್ದು, ಅನರ್ಹರಿಗೆ ಕಾರ್ಡ್ ವಿತರಿಸಿದ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ರದ್ದುಪಡಿಸಿದ ಕಾರ್ಡುಗಳಿಗೆ ಸಂಬಂಧಿಸಿದಂತೆ ಕಾರ್ಮಿಕರಿಗೆ ತಕರಾರು ಅಥವಾ ಆಕ್ಷೇಪಣೆ ಇದ್ದಲ್ಲಿ ಸಮರ್ಪಕ ದಾಖಲೆಗಳೊಂದಿಗೆ ಕ್ಷೇತ್ರವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳ ಕಛೇರಿಗೆ ಮೇಲ್ಮನವಿ ಸಲ್ಲಿಸಲು ಕರ್ನಾಟಕ ನಿಯಮಗಳು, 2006 ರ ನಿಯಮ 20(8) ರಲ್ಲಿ ಅವಕಾಶ ಕಲ್ಪಿಸಲಾಗಿದೆ.<br>ಮುಂದುವರೆದು, ಅನರ್ಹ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿದ್ದಲ್ಲಿ ಸ್ವತಃ ಅವರೇ ಬಂದು ನೋಂದಣಿಯನ್ನು ರದ್ದು ಪಡಿಸುಕೊಳ್ಳುವಂತೆ ಮತ್ತು ಮುಂದಿನ ದಿನಗಳಲ್ಲಿ ನೋಂದಣಿಯಾಗದಂತೆ ದಿನ ಪತ್ರಿಕೆಗಳಲ್ಲಿ ರಾಜ್ಯದಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ. |

**ಕಾಇ 560 ಎಲ್ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ**

## ಅನುಬಂಧ-01

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಳೆದ ಐದು ವರ್ಷದಲ್ಲಿ ನೋಂದಾಯಿಸಿಕೊಂಡ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ವಿವರ: ಕೆಳಕಂಡಂತಿದೆ.**

| ಕ್ರ.ಸಂ | ಜಿಲ್ಲೆ | 2020-2021 | 2021-2022 | 2022-2023 | 2023-2024 | 2024-25 | ಒಟ್ಟು |
|---|---|---|---|---|---|---|---|
| 1 | BAGALKOT | 6847 | 45767 | 45968 | 3188 | 3191 | 104961 |
| 2 | BANGALORE RURAL | 1130 | 5712 | 8111 | 1407 | 1609 | 17969 |
| 3 | BANGALORE URBAN | 9977 | 105681 | 194392 | 19100 | 14274 | 343424 |
| 4 | BELGAUM | 14398 | 64235 | 60335 | 8898 | 5463 | 153329 |
| 5 | BELLARY | 4161 | 20834 | 22723 | 1546 | 912 | 50176 |
| 6 | BIDAR | 12520 | 60455 | 46167 | 6088 | 633 | 125863 |
| 7 | BIJAPUR | 5964 | 34537 | 45759 | 5494 | 712 | 92466 |
| 8 | CHAMARAJA NAGAR | 3978 | 11123 | 15219 | 853 | 737 | 31910 |
| 9 | CHIKBALLAPUR | 1736 | 16617 | 17819 | 1488 | 1156 | 38816 |
| 10 | CHIKMAGALUR | 5500 | 28241 | 23740 | 1815 | 1412 | 60708 |
| 11 | CHITRADURGA | 7012 | 40917 | 29638 | 4490 | 1878 | 83935 |
| 12 | DAKSHINA KANNADA | 7988 | 25253 | 12600 | 1557 | 1987 | 49385 |
| 13 | DAVANAGERE | 9628 | 38821 | 41318 | 4781 | 5086 | 99634 |
| 14 | DHARWAD | 8831 | 44797 | 49132 | 5732 | 3860 | 112352 |
| 15 | GADAG | 4952 | 34038 | 27107 | 1682 | 2240 | 70019 |
| 16 | GULBARGA | 7415 | 112942 | 56960 | 3037 | 972 | 181326 |
| 17 | HASSAN | 7338 | 25275 | 20932 | 1707 | 1245 | 56497 |
| 18 | HAVERI | 10711 | 79516 | 72780 | 2706 | 2075 | 167788 |
| 19 | KODAGU | 697 | 2054 | 2076 | 323 | 344 | 5494 |

| | | | | | | | |
|---|---|---|---|---|---|---|---|
| 20 | KOLAR | 3066 | 29274 | 27111 | 4529 | 2262 | 66242 |
| 21 | KOPPAL | 8499 | 77052 | 63077 | 6048 | 3795 | 158471 |
| 22 | MANDYA | 1881 | 8149 | 10443 | 1177 | 479 | 22129 |
| 23 | MYSORE | 9705 | 35646 | 44138 | 4185 | 2754 | 96428 |
| 24 | RAICHUR | 5853 | 22330 | 22644 | 3051 | 2268 | 56146 |
| 25 | RAMANAGARA | 2014 | 14344 | 18473 | 1562 | 543 | 36936 |
| 26 | SHIMOGA | 13189 | 25308 | 20513 | 2819 | 2269 | 64098 |
| 27 | TUMKUR | 4742 | 26816 | 37519 | 3966 | 1927 | 74970 |
| 28 | UDUPI | 3622 | 18990 | 9336 | 809 | 452 | 33209 |
| 29 | UTTARA KANNADA | 8159 | 36286 | 38487 | 4925 | 3236 | 91093 |
| 30 | Vijayanagara | 2793 | 3209 | 2884 | 1642 | 1647 | 12175 |
| 31 | Yadgiri | 3079 | 50833 | 29289 | 1109 | 437 | 84747 |
| | **Total** | **197385** | **1145052** | **1116690** | **111714** | **71855** | **2642696** |

ಆಯುಕ್ತರು
ಕಾರ್ಮಿಕ ಇಲಾಖೆ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ**

## ಅನುಬಂಧ-2

## ಕಳೆದ 5 ವರ್ಷಗಳಲ್ಲಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ಕೆಳಕಂಡಂತಿದೆ.

| | | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ | | | | | | ಇ-ಶ್ರಮ್ ಕಾರ್ಯಕ್ರಮ | | | | | ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರು |
|---|---|---|---|---|---|---|---|---|---|---|---|---|---|
| ಕ್ರ.ಸಂ. | ಜಿಲ್ಲೆ | 2020-21 | 2021-22 | 2022-23 | 2023-24 | 2024-25 | ಒಟ್ಟು | 2021-22 | 2022-23 | 2023-24 | 2024-25 | ಒಟ್ಟು | 2024-25 |
| 1 | ಬಾಗಲಕೋಟೆ | 3988 | 5420 | 2426 | 128 | 93627 | 105589 | 189641 | 42567 | 53463 | 130413 | 416084 | 9889 |
| 2 | ಬೆಂಗಳೂರು ನಗರ | 6502 | 9066 | 2712 | 712 | 171972 | 190964 | 251764 | 81554 | 51690 | 96968 | 481976 | 40583 |
| 3 | ಬೆಂಗಳೂರು ಗ್ರಾಮಾಂತರ | 372 | 638 | 200 | 44 | 65008 | 66262 | 122852 | 30405 | 51690 | 13463 | 218410 | 11328 |
| 4 | ಬೆಳಗಾವಿ | 8673 | 3122 | 2783 | 120 | 248980 | 263678 | 540667 | 150046 | 99701 | 163928 | 954342 | 22383 |
| 5 | ಬಳ್ಳಾರಿ | 3449 | 10937 | 3579 | 280 | 113882 | 132127 | 332786 | 59516 | 28822 | 50878 | 472002 | 21448 |
| 6 | ಬೀದರ್ | 1140 | 1865 | 155 | 16 | 52099 | 55275 | 244542 | 21008 | 13850 | 116649 | 396049 | 9405 |
| 7 | ವಿಜಾಪುರ್ | 917 | 1399 | 1256 | 299 | 31967 | 35838 | 119015 | 42824 | 204990 | 163216 | 530045 | 13275 |
| 8 | ಚಾಮರಾಜನಗರ | 1813 | 809 | 501 | 8 | 49361 | 52492 | 160479 | 26043 | 8959 | 24499 | 219980 | 6752 |
| 9 | ಚಿಕ್ಕಬಳ್ಳಾಪುರ | 1395 | 1335 | 562 | 131 | 51296 | 54719 | 161844 | 32581 | 6158 | 22824 | 223407 | 9540 |
| 10 | ಚಿಕ್ಕಮಗಳೂರು | 1312 | 769 | 291 | 37 | 28065 | 30474 | 107310 | 56778 | 13193 | 16832 | 194113 | 14544 |

| | | | | | | | | | | | | | |
|---|---|---|---|---|---|---|---|---|---|---|---|---|---|
| 11 | ಚಿತ್ರದುರ್ಗ | 1748 | 2377 | 809 | 279 | 56124 | 61337 | 188821 | 56252 | 22404 | 32993 | 300470 | 9580 |
| 12 | ದಕ್ಷಿಣ-ಕನ್ನಡ | 1563 | 3421 | 479 | 30 | 72774 | 78267 | 179892 | 42918 | 10271 | 11253 | 244334 | 17508 |
| 13 | ದಾವಣಗೆರೆ | 3497 | 4020 | 3004 | 1420 | 53440 | 65381 | 204318 | 50090 | 25336 | 36546 | 316290 | 10269 |
| 14 | ಧಾರವಾಡ | 1342 | 3307 | 924 | 181 | 60188 | 65942 | 220937 | 40075 | 32423 | 61343 | 354778 | 13943 |
| 15 | ಗದಗ | 915 | 2073 | 438 | 42 | 36303 | 39771 | 131524 | 27026 | 11528 | 24545 | 194623 | 6135 |
| 16 | ಹಾಸನ | 2174 | 1764 | 1971 | 3222 | 34402 | 43533 | 174395 | 66300 | 14631 | 23063 | 278389 | 24579 |
| 17 | ಹಾವೇರಿ | 1243 | 1845 | 715 | 221 | 49118 | 53142 | 256498 | 43465 | 24498 | 39957 | 364418 | 8067 |
| 18 | ಕಲಬುರಗಿ | 2043 | 2494 | 980 | 145 | 81919 | 87581 | 314126 | 50150 | 88669 | 168704 | 621649 | 16300 |
| 19 | ಕೊಡಗು | 1540 | 825 | 200 | 60 | 7300 | 9925 | 34092 | 14032 | 3007 | 11297 | 62428 | 8851 |
| 20 | ಕೋಲಾರ | 383 | 686 | 81 | 41 | 54548 | 55739 | 179187 | 31009 | 9141 | 28701 | 248038 | 12507 |
| 21 | ಕೊಪ್ಪಳ | 2557 | 1766 | 595 | 39 | 33416 | 38373 | 155375 | 29669 | 14799 | 62138 | 261981 | 6239 |
| 22 | ಮಂಡ್ಯ | 2449 | 828 | 511 | 18 | 65648 | 69454 | 194092 | 68817 | 16765 | 26720 | 306394 | 11553 |
| 23 | ಮೈಸೂರು | 3399 | 2321 | 3191 | 411 | 94267 | 103589 | 292018 | 79358 | 31706 | 52821 | 455903 | 15324 |
| 24 | ರಾಯಚೂರು | 2462 | 2766 | 1516 | 563 | 43924 | 51231 | 173168 | 42392 | 26951 | 175766 | 418277 | 8397 |
| 25 | ರಾಮನಗರ | 668 | 1047 | 537 | 130 | 35902 | 38284 | 115520 | 29991 | 11332 | 18265 | 175108 | 6815 |
| 26 | ಶಿವಮೊಗ್ಗ | 1839 | 2583 | 1492 | 60 | 60003 | 65977 | 206687 | 74969 | 26742 | 33131 | 341529 | 11900 |
| 27 | ತುಮಕೂರು | 3271 | 5747 | 1392 | 368 | 101643 | 112421 | 254679 | 81047 | 25490 | 34849 | 396065 | 18805 |
| 28 | ಉಡುಪಿ | 1186 | 2611 | 1163 | 79 | 51413 | 56452 | 152952 | 30638 | 7769 | 7183 | 198542 | 25162 |
| 29 | ಉತ್ತರ-ಕನ್ನಡ | 36389 | 1917 | 1345 | 79 | 33619 | 73349 | 198910 | 44856 | 16857 | 38819 | 299442 | 8824 |
| 30 | ವಿಜಯನಗರ | - | - | - | - | 5032 | 5032 | 2947 | 30266 | 12030 | 41420 | 86663 | 9968 |
| 31 | ಯಾದಗಿರಿ | 1119 | 976 | 214 | 154 | 23753 | 26216 | 119015 | 29317 | 10181 | 109546 | 268059 | 5429 |
| | **ಒಟ್ಟು** | **101348** | **80734** | **36022** | **9317** | **1960993** | **2188414** | **190964** | **1505959** | **931685** | **1838730** | **10305839** | **415332** |

ಆಯುಕ್ತರು
ಕಾರ್ಮಿಕ ಇಲಾಖೆ

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ

# ಅನುಬಂಧ-3

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 2019-20ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಮಂಡಳಿಗೆ ವಂತಿಕೆ ಪಾವತಿಸಿದ ಕಾರ್ಮಿಕರ ಜಿಲ್ಲಾವಾರು ವಿವರ ಕೆಳಗಿನಂತಿದೆ.

| ಕ್ರ.ಸಂ. | ಜಿಲ್ಲೆಗಳು | 2019-2020 | 2020-2021 | 2021-2022 | 2022-2023 | 2023-2024 |
|---|---|---|---|---|---|---|
| 1 | ಬೆಂಗಳೂರು ನಗರ | 3358067 | 3451084 | 3821691 | 4277986 | 4609489 |
| 2 | ಬೆಂಗಳೂರು ಗ್ರಾಮಾಂತರ | 105424 | 252307 | 87041 | 109845 | 120418 |
| 3 | ಬೆಳಗಾಂ | 46170 | 28733 | 30222 | 39829 | 35165 |
| 4 | ಬಳ್ಳಾರಿ | 45713 | 34286 | 48803 | 52934 | 63637 |
| 5 | ಬೀದರ್ | 5037 | 5213 | 3154 | 3088 | 3247 |
| 6 | ಬಾಗಲಕೋಟೆ | 13396 | 12520 | 11028 | 12141 | 11181 |
| 7 | ವಿಜಯಪುರ | 13881 | 5811 | 8908 | 9589 | 10965 |
| 8 | ಚಿಕ್ಕಮಗಳೂರು | 12611 | 6143 | 6337 | 6222 | 5607 |
| 9 | ಚಾಮರಾಜನಗರ | 5511 | 2001 | 2229 | 2525 | 3614 |
| 10 | ಚಿತ್ರದುರ್ಗ | 5661 | 4398 | 5523 | 6363 | 5757 |
| 11 | ಚಿಕ್ಕಬಳ್ಳಾಪುರ | 10751 | 4386 | 5161 | 5913 | 6184 |
| 12 | ದಾವಣಗೆರೆ | 16153 | 9135 | 9507 | 8588 | 10249 |
| 13 | ದಕ್ಷಿಣ ಕನ್ನಡ | 69183 | 45662 | 36479 | 44835 | 51303 |
| 14 | ಧಾರವಾಡ | 50632 | 14671 | 31371 | 34941 | 32391 |
| 15 | ಗದಗ | 3782 | 3717 | 3820 | 3311 | 1607 |
| 16 | ಕಲ್ಬುರ್ಗಿ | 17616 | 12951 | 12135 | 14431 | 13833 |
| 17 | ಹಾವೇರಿ | 7969 | 4351 | 5413 | 5019 | 7374 |
| 18 | ಹಾಸನ | 22944 | 14308 | 12438 | 15654 | 16604 |
| 19 | ಕೊಡಗು | 10512 | 8735 | 9846 | 9704 | 8993 |
| 20 | ಕೋಲಾರ | 31393 | 17688 | 20669 | 21527 | 23036 |
| 21 | ಕೊಪ್ಪಳ | 4958 | 2899 | 5139 | 6328 | 5977 |
| 22 | ಮೈಸೂರು | 93653 | 83809 | 94372 | 96077 | 91000 |
| 23 | ಮಂಡ್ಯ | 19889 | 15384 | 17822 | 18656 | 22225 |
| 24 | ರಾಮನಗರ | 40624 | 12819 | 24548 | 21427 | 21995 |

| | | | | | | |
|---|---|---|---|---|---|---|
| 25 | ರಾಯಚೂರು | 7379 | 3329 | 3389 | 3742 | 4803 |
| 26 | ಶಿವಮೊಗ್ಗ | 27965 | 20660 | 25091 | 26492 | 29057 |
| 27 | ತುಮಕೂರು | 34631 | 22404 | 25193 | 27241 | 25027 |
| 28 | ಉಡುಪಿ | 37452 | 15644 | 16217 | 16996 | 20170 |
| 29 | ಉತ್ತರ ಕನ್ನಡ | 7999 | 8997 | 8582 | 9986 | 9451 |
| 30 | ಯಾದಗಿರಿ | 4107 | 168 | 1135 | 513 | 1853 |
| | ಒಟ್ಟು | 4131063 | 4124213 | 4393263 | 4911903 | 5272212 |

ಆಯುಕ್ತರು
ಕಾರ್ಮಿಕ ಇಲಾಖೆ

**<u>ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ</u>**

# <u>ಅನುಬಂಧ -4</u>

**ಮಂಡಳಿಯ ವತಿಯಿಂದ ಅನುಷ್ಠಾನಗೊಳಿಸಿರುವ ಸೌಲಭ್ಯಗಳು ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತುಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:**

1. **ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-**

2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ/ಪತ್ನಿಗೆ ಮಾಸಿಕ **ರೂ.1500/-**

3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆ ಅನುಗ್ರಹರಾಶಿ ಸಹಾಯಧನ.

4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)

5. **ಟ್ರೈನಿಂಗ್-ಕಮ್-ಟೂಲ್‌ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ.20,000/-ವರೆಗೆ**

6. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ

7. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ. 50,000/-

8. **ಅಂತ್ಯಕ್ರಿಯೆ ವೆಚ್ಚ : ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.71,000/-** ಸಹಾಯಧನ
9. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳವಿದ್ಯಾಭ್ಯಾಸಕ್ಕಾಗಿ:

| ಕ್ರ ಸಂ | ವಿದ್ಯಾಭ್ಯಾಸದ ವಿವರ<br>(ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿಕ ಸಹಾಯಧನ ಮೊತ್ತ (ರೂ. ಗಳಲ್ಲಿ) |
|---|---|---|
| 1 | **1** ರಿಂದ **5** ನೇ ತರಗತಿ | 1,800 |
| 2 | **6** ರಿಂದ **8** ನೇ ತರಗತಿ | 2,400 |
| 3 | **9** ಹಾಗೂ **10**ನೇ ತರಗತಿ | 3,000 |
| 4 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 4,600 |
| 5 | ಪದವಿ | 10,000 |
| 6 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | 10,000 |
| 7 | ಸ್ನಾತಕೋತ್ತರ ಪದವಿ | 10,000 |
| 8 | ಪಾಲಿಟೆಕ್ನಿಕ್ **/** ಡಿಪ್ಲಮಾ/ ಐಟಿಐ | 4,600 |
| 9 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್ / ಅಕ್ಸಲರಿ ನರ್ಸಿಂಗ್ ಆಂಡ್ ಮಿಡ್ವೈಫ್ | 10,000 |
| 10 | ಬಿ.ಎಡ್ | 6,000 |
| 11 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ ಎಸ್/ ಬಿಡಿಎಸ್ /ಬಿಹೆಚ್‌ಎಮ್ ಎಸ್ ಕೋರ್ಸ್ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್ | 11,000 |
| 12 | ಎಲ್‌ಎಲ್ ಬಿ/ಎಲ್ ಎಲ್ ಎಂ | 10,000 |
| 13 | ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) | 10,000 |
| 14 | ಎಮ್‌ಡಿ ಮೆಡಿಕಲ್ | 12,000 |
| 15 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | 11,000 |
| 16 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ಎಐಐಎಮ್‌ಎಸ್/ಎನ್‌ಎಲ್‌ಯೂ ಮತ್ತು ಭಾರ ಸರ್ಕಾರದ ಮಾನ್ಯತೆ ಪಡೆದ ಕೋರ್ಸುಗಳು. | 11,000 |

10. **ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ. 300/- ರಿಂದ ರೂ. 20,000/-** ವರೆಗೆ

11. **ಅಪಘಾತ ಪರಿಹಾರ:** ನೊಂದಾಯಿತ ಕಟ್ಟಡ ಕಾರ್ಮಿಕರು ಮರಣ ಹೊಂದಿದ್ದಲ್ಲಿ **ರೂ. 5,00,000/-**ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-**

12. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ

ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿಶಸ್ತ್ರ ಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔಧ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**

13. **ಮದುವೆ ಸಹಾಯ ಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ **ತಲಾ ರೂ.60,000/-**ಗಳು.
14. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/-ಗಳ** ಸಹಾಯಧನ.

ಆಯುಕ್ತರು

**ಕಾರ್ಮಿಕ ಇಲಾಖೆ**